**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ,**
**ಕೆ.ಆರ್.ವೃತ್ತ, ಬೆಂಗಳೂರು–560 001**

**ಸಂಖ್ಯೆಎಂಸಿ4ಮಸಂಶಾಘೋ12/2008–09** **ದಿನಾಂಕ 09/03/2010**

**ಜ್ಞಾಪನಾ**

ವಿಷಯ:–ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ:–1) ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ4ಎಸ್ಎಂಸಿ 2005 ದಿನಾಂಕ11/09/2007 ಹಾಗೂ ತಿದ್ದುಪಡಿ ದಿನಾಂಕ23/10/2007.

2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ5ಎಸ್ಎಂಸಿ2002 ದಿನಾಂಕ20/7/2004

3) ಸರ್ಕಾರದ ತಿದ್ದೋಲೆಸಂಖ್ಯೆಇಡಿ22ಎಂಪಿಎಸ್ 2005 ದಿನಾಂಕ12/12/2006

4) ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳು

—000—

**ಪ್ರಸ್ತಾವನೆ :–**

ಮೇಲಿನ ಉಲ್ಲೇಖ(1)ರಿಂದ(3)ರವರೆಗಿನ ಸರ್ಕಾರಿ ಅಧಿಸೂಚನೆಗಳಲ್ಲಿ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ 09/03/2010ರಂದು ಪರಿಶೀಲನಾ ಸಮಿತಿ ಸಭೆ ಸೇರಿ ಕೆಳಕಂಡ ಶಿಕ್ಷಣ ಸಂಸ್ಥೆಗಳ ದಾಖಲೆಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಕೆಳಕಂಡ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸುವ ಬಗ್ಗೆ ಕೆಲವೊಂದು ಷರತ್ತುಗಳನ್ನು ಅನ್ವಯಿಸಿ, ಸದರಿ ಷರತ್ತುಗಳನ್ನು ಪೂರೈಸಿರುವಂತಹ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತರ ಶಾಲೆಗಳೆಂದು ಘೋಷಿಸಲು ಸಮಿತಿಯು ತೀರ್ಮಾನಿಸಿತು.

**ಆದೇಶ :–**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಶಾಲೆಗಳನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ. ಕಾಲಾನುಕಾಲಕ್ಕೆ ಮಾನ್ಯತೆಯನ್ನು ನವೀಕರಿಸುವ ಸಮಯದಲ್ಲಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಘೋಷಣೆ ಮಾಡಲಾದ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹಿಂತೆಗೆದುಕೊಳ್ಳಲಾಗುವುದು.

| ಕ್ರಮ ಸಂಖ್ಯೆ | ಶಿಕ್ಷಣ ಸಂಸ್ಥೆಯ ಹೆಸರು | ಧರ್ಮ | ಶಾಲೆಯ ಹೆಸರು ಮತ್ತು ವಿಳಾಸ |
|---|---|---|---|
| 1 | **ಮೌಂಟ್ ಕಾರ್ಮೆಲ್ ಎಜುಕೇಶನ್ ಸೊಸೈಟಿ, ಬಿ.ಹೆಚ್.ರಸ್ತೆ, ಶಿವಮೊಗ್ಗ** | **ಕ್ರಿಶ್ಚಿಯನ್** | **ದೀಪಿಕಾ ಕನ್ನಡ ಕಿರಿಯ ಪ್ರಾಥಮಿಕ ಶಾಲೆ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ** |
| 2 | **ಇಕ್ರಾ ಎಜುಕೇಶನಲ್ ಅಂಡ್ ಚಾರಿಟಬಲ್ ಟ್ರಸ್ಟ್, ಸಿದ್ದಾಪುರ, ಮಡಿಕೇರಿ ತಾ.. ಮತ್ತು ಜಿಲ್ಲೆ** | **ಮುಸ್ಲಿಂ** | **ಇಕ್ರಾ ಪಬ್ಲಿಕ್ ಪ್ರಾಥಮಿಕ ಶಾಲೆ, ಸಿದ್ದಾಪುರ, ಮಡಿಕೇರಿ ತಾ.. ಮತ್ತು ಜಿಲ್ಲೆ** |
| 3 | **ಪ್ರೆಸಿಡೆನ್ಸಿ ಎಜುಕೇಶನಲ್ ಟ್ರಸ್ಟ್, ಮಹಾಲಕ್ಷ್ಮೀ ಬಡಾವಣೆ, ಕೋಲಾರ** | **ಮುಸ್ಲಿಂ** | **ಪ್ರೆಸಿಡೆನ್ಸಿ ಹಿರಿಯ ಪ್ರಾಥಮಿಕ ಶಾಲೆ, ಸುಲ್ತಾನ ತಿಪ್ಪಸಂದ್ರ, ಮಹಾಲಕ್ಷ್ಮೀ ಬಡಾವಣೆ, ಕೋಲಾರ** |

| | | | |
|---|---|---|---|
| 4 | ದ ಸಿಸ್ಟರ್ಸ್ ಆಫ್ ಚಾರಿಟಿ ಎಜುಕೇಶನಲ್ ಸೊಸೈಟಿ, ಆಫ್ ಕರ್ನಾಟಕ ಸ್ಟೇಟ್, ಹೋಲಿ ಏಂಜಲ್ಸ್ ಕಾನ್ವೆಂಟ್, ಬೆಲ್ವದೆರೆ, ಮಂಗಳೂರು-575002. | ಕ್ರಿಶ್ಚಿಯನ್ | ಅನುಗ್ರಹ ಹಿರಿಯ ಪ್ರಾಥಮಿಕ ಶಾಲೆ, ಅರೇಹಳ್ಳಿ, ಬೇಲೂರು ತಾ.. ಹಾಸನ ಜಿಲ್ಲೆ |
| 5 | ಸಂತ ಅಂತೋನಿ ಎಜುಕೇಶನಲ್ ಅಂಡ್ ಚಾರಿಟಬಲ್ ಟ್ರಸ್ಟ್, ಕುಟಿನ್ಹೋಪದವು, ಮಂಗಳೂರು(ದ.ಕ) | ಕ್ರಿಶ್ಚಿಯನ್ | ಸಂತ ಅಂತೋನಿ ಪ್ರಾಥಮಿಕ ಶಾಲೆ, ಕುಟಿನ್ಹೋಪದವು, ಉಳಾಯಿಬೆಟ್ಟು, ಮಲ್ಲೂರು ಅಂಚೆ, ಮಂಗಳೂರು(ದ.ಕ) |
| 6 | ಕ್ರೈಸ್ತ ಎಜುಕೇಶನಲ್ ಸೊಸೈಟಿ, ಧರ್ಮಾರಾಂ ಕಾಲೇಜು ಅಂಚೆ, ಎಸ್.ಜಿ.ಪಾಳ್ಯ ಬೆಂಗಳೂರು-29 | ಕ್ರಿಶ್ಚಿಯನ್ | ಕ್ರಿಸ್ತ ವಿದ್ಯಾಲಯ ಪ್ರೌಢಶಾಲೆ, ಧರ್ಮಾರಾಂ ಕಾಲೇಜು ಅಂಚೆ, ಎಸ್.ಜಿ.ಪಾಳ್ಯ ಬೆಂಗಳೂರು-29 |
| 7 | ಸೊಸೈಟಿ ಆಫ್ ಅರ್ಸುಲೈನ್ ಸಿಸ್ಟರ್ಸ್ ಆಫ್ ಸೊಮಾಸ್ಕಾ, ಎನ್.ಆರ್.ಮೊಹಲ್ಲಾ, ಮೈಸೂರು | ಕ್ರಿಶ್ಚಿಯನ್ | ವಿದ್ಯಾಜ್ಯೋತಿ ಹಿರಿಯ ಪ್ರಾಥಮಿಕ ಶಾಲೆ, ನಾಡನಹಳ್ಳಿ, ಬನ್ನೂರು ರಸ್ತೆ, ಮೈಸೂರು |
| 8 | ಕ್ರೈಸ್ತ ಎಜುಕೇಶನಲ್ ಸೊಸೈಟಿ, ಧರ್ಮಾರಾಂ ಕಾಲೇಜು ಅಂಚೆ, ಎಸ್.ಜಿ.ಪಾಳ್ಯ ಬೆಂಗಳೂರು-29 | ಕ್ರಿಶ್ಚಿಯನ್ | ಕ್ರೈಸ್ತ ಆಂಗ್ಲ ಪ್ರೌಢಶಾಲೆ, ಧರ್ಮಾರಾಂ ಕಾಲೇಜು ಅಂಚೆ, ಎಸ್.ಜಿ.ಪಾಳ್ಯ ಬೆಂಗಳೂರು-29 |
| 9 | ದ ಮೈಸೂರು ಡಯಾಸಿಸನ್ ಎಜುಕೇಶನ್ ಸೊಸೈಟಿ, ಸೇಂಟ್ ಜೋಸೆಫ್ಸ್ ಕಾಂಪ್ಲೆಕ್ಸ್, ಮೈಸೂರು-12 | ಕ್ರಿಶ್ಚಿಯನ್ | ಸೇಂಟ್ ಅಂಟೋನೀಸ್ ಗ್ರಾಮಾಂತರ ಪ್ರೌಢಶಾಲೆ, ಸಂದನಪಾಳ್ಯ, ಮಾರ್ಟಳ್ಳಿ ಅಂಚೆ, ಕೊಳ್ಳೆಗಾಲ ತಾ... |
| 10 | ಎಸ್.ಎನ್.ಎಸ್.ಎಜುಕೇಶನಲ್ ಟ್ರಸ್ಟ್ ನಂ8, 6ನೇಮುಖ್ಯರಸ್ತೆ ಆರ್.ಎಂ.ಎಸ್.ಲೇಔಟ್, ಸಂಜಯನಗರ, ಬೆಂಗಳೂರು-94 | ಮುಸ್ಲಿಂ | ಕೇಂಬ್ರಿಡ್ಜ್ ಪಬ್ಲಿಕ್ ಶಾಲೆ (ಪ್ರೌಢಶಾಲೆ), ನ್ಯೂಟೌನ್ ಯಲಹಂಕ, ಬೆಂಗಳೂರು |
| 11 | ಕೇಂಬ್ರಿಡ್ಜ್ ಎಜುಕೇಶನ್ ಸೊಸೈಟಿ, ಎನ್,ಇ,ಎಸ್, ಕಛೇರಿ ರಸ್ತೆ, ಯಲಹಂಕ, ಬೆಂಗಳೂರು-64 | ಮುಸ್ಲಿಂ | ಕೇಂಬ್ರಿಡ್ಜ್ ಆಂಗ್ಲ ಪ್ರಾಥಮಿಕ ಶಾಲೆ, ಎನ್,ಇ,ಎಸ್, ಕಛೇರಿ ರಸ್ತೆ, ಯಲಹಂಕ, ಬೆಂಗಳೂರು-64 |
| 12 | ಕೇಂಬ್ರಿಡ್ಜ್ ಎಜುಕೇಶನ್ ಸೊಸೈಟಿ, ಎನ್,ಇ,ಎಸ್, ಕಛೇರಿ ರಸ್ತೆ, ಯಲಹಂಕ, ಬೆಂಗಳೂರು-64 | ಮುಸ್ಲಿಂ | ಕೇಂಬ್ರಿಡ್ಜ್ ಆಂಗ್ಲ ಪ್ರೌಢಶಾಲೆ, ಎನ್,ಇ,ಎಸ್, ಕಛೇರಿ ರಸ್ತೆ, ಯಲಹಂಕ, ಬೆಂಗಳೂರು-64 |
| 13 | ಎಸ್.ಎಂ.ಹಮ್‌ದರ್ದ್ ವಿದ್ಯಾ ಮತ್ತು ಕಲ್ಯಾಣ ಸಂಸ್ಥೆ, ಟಿಪ್ಪುನಗರ, (ಭಾಷಾನಗರ), ದಾವಣಗೆರೆ | ಮುಸ್ಲಿಂ | ಎಸ್.ಎಂ. ಕನ್ನಡ ಮತ್ತು ಉರ್ದು ಹಿರಿಯ ಪ್ರಾಥಮಿಕ ಶಾಲೆ, ಟಿಪ್ಪುನಗರ, (ಭಾಷಾನಗರ), ದಾವಣಗೆರೆ |

**ಷರತ್ತುಗಳು**

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ನೊಂದಣಿ ಕಾಯ್ದೆ ಪ್ರಕಾರ ನೊಂದಣಿಯಾಗಿರಬೇಕು. ಹಾಗೂ ಕಾಲಕಾಲಕ್ಕೆ ನವೀಕರಿಸಿರಬೇಕು.
2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಮತೀಯ ಅಲ್ಪಸಂಖ್ಯಾತರ ಸಂಖ್ಯೆ ಕನಿಷ್ಟ ಮೂರನೆ ಎರಡರಷ್ಟಿರಬೇಕು.

3) ಶಾಲೆಗಳನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.

4) ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ/ಪ್ರೌಢಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೊಂದಾಯಿಸಿರಬೇಕು, ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು. ಹಾಗೂ ಇತ್ತೀಚಿನ ಮಾನ್ಯತೆ ನವೀಕರಣ ಪತ್ರ ಹೊಂದಿರತಕ್ಕದ್ದು.

5) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ, ಆಯಾಯ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳನ್ನು ಕನಿಷ್ಟ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು.

5) ಶಾಲೆಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಯು ಆಯಾ ಮತೀಯ ಅಲ್ಪಸಂಖ್ಯಾತ(ಕ್ರಿಶ್ಚಿಯನ್, ಮುಸ್ಲಿಂ,ಜೈನ,ಬೌದ್ಧ, ಸಿಖ್) ರೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಯನ್ನು

1)ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ)ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2)ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢಶಿಕ್ಷಣ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ

3)ಉಪನಿರ್ದೇಶಕರು, (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ, ಮಡಿಕೇರಿ, ದಕ್ಷಿಣಕನ್ನಡ, ಚಾಮರಾಜನಗರ, ದಾವಣಗೆರೆ, ಮೈಸೂರು ಮತ್ತು ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕೋಲಾರ ಇವರುಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

4)ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅರಸೀಕೆರೆ, ಹನೂರುವಲಯ– ಕೊಳ್ಳೆಗಾಲ ತಾ.., ದಕ್ಷಿಣವಲಯ–3, ಉತ್ತರವಲಯ–4 ಯಲಹಂಕ, ಪುತ್ತೂರು, ದಾವಣಗೆರೆ ದಕ್ಷಿಣ, ಮೈಸೂರು, ಮಂಗಳೂರು ತಾ.. ಬೇಲೂರು ಹಾಸನ ಜಿಲ್ಲೆ, ಕೋಲಾರ, ಮಡಿಕೇರಿ ತಾ.. ಮೊಳಕಾಲ್ಮೂರು ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

5)ಸಂಬಂಧಿಸಿದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

6)ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

7)ಕಛೇರಿ ಪ್ರತಿ